ಕಥೆ



**ಸಪ್ನಾ ಕಟ್ಟಿ**

ಕಲೆ: ಎಸ್.ವಿ. ಹೂಗಾರ್

ಎಸಬೆಸ್ಟಾಸ್ ತಾರಸಿಯ ಮೇಲೆ ಠಣಠಣ ಕಲ್ಲೊಗೆದಂತೆ ಬೀಳುವ ನೀರ ಹನಿಗಳು; ಆ ಸಪ್ಪಳದ ಏಕತಾನತೆಯನ್ನು ಭಂಗಿಸುವ ಕಪ್ಪೆಗಳ ಗುಟುರು. ಎಲ್ಲ ಸದ್ದುಗಳನ್ನು ಮುಚ್ಚಿ ಹಾಕುವಂತೆ ಅಬ್ಬರಿಸುತ್ತಿದ್ದ ಮಾಲು ಲಾರಿಯ ಕರ್ಕಶ ಹಾರ್ನ್. ಆದರೆ ಯಾವ ಸದ್ದೂ ಪ್ರಾಜಕ್ತಾಳನ್ನು ತಟ್ಟಿರಲೇ ಇಲ್ಲ. ಸಂಜೆಯ ಈ ಹೊತ್ತೇ ಕಿಟಕಿಯ ಪಕ್ಕ ಕೂತುಕೊಂಡು ಅವಳು ತನ್ನ ಪುಟ್ಟ ಕೈಕನ್ನಡಿ ನೋಡ್ಕೋಳ್ಳೋದು. ಇಳಿವ ಸೂರ್ಯನ ಕೆಂಪು ಬೆಳಕಿನಲ್ಲಿ ತನ್ನ ಗಲ್ಲ ಹೆಚ್ಚಿಟ್ಟ ಮಾವಿನ ಹೋಳಂತೆ ಹೊಳೆವುದನ್ನು ನೋಡೋಕೆ ಅವಳಿಗೆ ತುಂಬಾ ಖುಷಿ. ಇದ್ದೊಂದೇ ಕಿಟಕಿಯಿಂದ ಬೆಳಕು ಒಳತೂರೋದು ಬಂದಾಗಿ ಕನ್ನಡಿ ಬರೇ ತಗಡಿನ ತುಂಡಿನಂತಾಗಿ ಹೋದರೂ ಕಣ್ಣಾಪೆಯಗಲಿಸಿ ಅದರ ಮುಂದೆ ಕುಳಿತೇ ಇರ್ತಾಳೆ.

'ಕತ್ತಲಾದರೂ ಲೈಟ್ ಹಾಕಲು ತಿಳಿಯಂಗಿಲ್ಲ ನಿನಗೆ?' ಅಂತ ಕೂಗುತ್ತಾ, ಹೊರಗಿನಿಂದ ಬಂದ ಅವಳವ್ವ ಜಮುನಾ ಇಪ್ಪತ್ತೈದು ವ್ಯಾಟಿನ ಬಲ್ಬಿನ ಗುಂಡಿಯದುಮಿದಳು. ಹಳದಿ ಬೆಳಕು. ನಾಲ್ಕು ಬಾಯ್ ನಾಲ್ಕರ ಖೋಲಿಯನ್ನು ತುಂಬಿ ದುಪಟಿ ಹೊದ್ದ ಟ್ರಂಕು, ಬಚ್ಚಲಿಗೆ ಪರದೆಯಾಗಿ ನಿಂತ ಹರಕು ಸೀರೆ, ಪ್ಲಾಸ್ಟಿಕ್ ಕುರ್ಚಿಯ ಜೊತೆಗೆ ತನ್ನ ಗಲ್ಲಗಳ ಕಪ್ಪು ಕಲೆಗಳನ್ನೂ ಎದ್ದು ತೋರಿಸಿದಂತಾಗಿ ಪ್ರಾಜಕ್ತಾ ಥಟ್ಟನೆ ಕುರ್ಚಿ ಸರಿಸಿ ಎದ್ದು ನಿಂತಳು. ಅಷ್ಟರಲ್ಲಿ ಬರ್ರನೆ ಬೀಸಿದ ಗಾಳಿಯೇ ಊದಿ ಆರಿಸಿದಂತೆ ಲೈಟು ಫಕ್ಕನೆ ನಂದಿ ಹೋಯಿತು.

'ಛೇ ಕರೆಂಟ್ ಹೋಯಿತು' ಅಂತ ಗೊಣಗುತ್ತ ಪ್ರಾಜಕ್ತಾ ಮೊಬೈಲಿನ ಮುಖ ಮಿನುಗಿಸಿದಳು. ಅದರ ಹಣೆಯ ಮೇಲೆ ವಿಭೂತಿ ಹಚ್ಚಿದಂತೆ ಮೂಡಿ ಮರೆಯಾಗುತ್ತಿದ್ದ ತರಂಗಗಳನ್ನು ನೋಡಿ, 'ಆಯಿತಿನ್ನು ಸಿಗ್ನಲ್ ಸುದ್ದಾ ಹೋಯ್ತೇನೋ. ಯಾರು ಇದಕ್ಕೆ, 'ಜುನಾ ಸುಣ್ಣಗಾರ ಓಣಿ' ಅಂತ ಹೆಸರಿಟ್ಟರೋ ಏನೋ? ಖರೇನ ಭಯಂಕರ ಹಳೇ ಜಾಗಾನೇ ಇದು; ನೀರಿಲ್ಲ, ಕರೆಂಟಿಲ್ಲ, ಸಿಗ್ನಲ್ ಇರೋದಿಲ್ಲ' ಅಂತ ಪ್ರಾಜಕ್ತಾ ಗೊಣಗುವಾಗಲೇ ಮೊಬೈಲ್ ಪರದೆಯೂ ನಂದಿತ್ತು. ಹೊಳೆವ ಕರಿಗಾಜಲ್ಲಿ ಕಂಡ ತನ್ನ ಚಿತ್ರ ತಾನೇ ನೋಡಿಕೊಂಡು, 'ವ್ವಾರೆ ವ್ವಾ ಮೇರಾ ಫೋಟೋ ನೆಗೆಟಿವ್' ಅಂತ ಪಕ್ಕನೆ ನಕ್ಕಳು. ಗಲ್ಲದಲ್ಲಿ ಒಂದು ಜೊತೆ ಗುಳಿಗಳು ಮೂಡಿದ್ದಕ್ಕೆ ತುಸು ಗೆಲುವಾದಳು. ಥೇಟ್ 'ಸೂಪರ್ ಸ್ಟಾರ್ ಸಿಂಗರ್'ನ ಜಡ್ಜ್ ನೇಹಾ ಕಕ್ಕರನಂತೆ ನಗಬೇಕು ಅಂತೆನಿಸಿ ತಲೆ ಚೂರೇ ಚೂರು ಬಲಕ್ಕೆ ವಾಲಿಸಿ, ಕೂದಲನ್ನು ಬಿಚ್ಚಿಕೊಂಡು ಭುಜದ ತುಂಬಾ ಹರವಿಕೊಂಡಳು. ಸಿಕ್ಕುಸಿಕ್ಕಾದ ಗುಂಗುರು ಎಳೆಗಳ ನಡುವೆ ಕೈ ಸಿಕ್ಕಿ ಅಯ್ಯ ಅಂತ ಕಿರುಚಿಕೊಂಡಳು. 'ಥೂ ಈ ಗುಂಗುರು ಕೂದಲು ಯಾರಿಗೂ ಇರ್ಬಾರ್ದಪ್ಪಾ' ಅಂತ